| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಭಾಷೆ ಕೋಗಿಲೆ (ಕವನ) | ಸರಳ ಹಾಗೂ ಬಳಕೆಯಲ್ಲಿರುವ ಪದ್ಯದ ಪ್ರಾಸಪದಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು | ಕಥೆಗಳ ಸಂಗ್ರಹ | ಶಿ | **<u>ಪೂರ್ವ ಸಿದ್ಧತಾ ಚಟುವಟಿಕೆ</u>** – "ಒಗಟ್ಟಿನಲ್ಲಿ ಬಲವಿದೆ" ಕಥೆಯ ವಿಷಯವನ್ನು ಪ್ರಶ್ನೋತ್ತರದ ಮೂಲಕ ಮಕ್ಕಳಿಂದ ಸಂಗ್ರಹಿಸುವರು. ಕಥೆಯನ್ನು ಪುನಃ ಹೇಳುವರು. | ಭಾಷೆ | ಕಥನಗಳು, ವಿವರಣೆಗಳು, ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಕಥೆಗಳ ಸಂಗ್ರಹ | ಮಕ್ಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** 'ಒಗ್ಗಟ್ಟಿನಲ್ಲಿ ಬಲವಿದೆ' ಕಥೆಯ ವಿಷಯವನ್ನು ಪ್ರಶ್ನೋತ್ತರದ ಮೂಲಕ ಮಕ್ಕಳಿಂದ ಸಂಗ್ರಹಿಸುವರು. ಕಥೆಯನ್ನು ಪುನಃ ಹೇಳುವರು. |
| | 05 ನಿ | | | | | ಮಾಸಿಕ ಪತ್ರಿಕೆಗಳಿಂದ ವಿವಿಧ ಪತ್ರಿಕೆಗಳ ಚಿತ್ರಗಳನ್ನು ಕತ್ತರಿಸಿ ಹಾಳೆಯ ಮೇಲೆ ಅಂಟಿಸಲು ಸೂಚಿಸುವರು. ಚಿತ್ರಗಳ ಕೆಳಗೆ ಹೆಸರನ್ನು ಬರೆಯಲು ಸೂಚಿಸುವರು. | | | | | ನೇರ ಬೋಧನೆಗೆ ಮಕ್ಕಳನ್ನು ಅಣಿಗೊಳಿಸುವರು. |
| | 25 ನಿ | | | ದಿನಪತ್ರಿಕೆ, ವಾರಪತ್ರಿಕೆ | ಸ್ವಯಂ ಕಲಿಕೆ | (ಚಿತ್ರಗಳನ್ನು ಕತ್ತರಿಸಿ, ಅಂಟಿಸಿ, ಹೆಸರುಗಳನ್ನು ಬರೆಯುವ ಚಟುವಟಿಕೆಯಲ್ಲಿ ನಿರತರಾಗುವರು) | | | ಪಠ್ಯಪುಸ್ತಕ | ಮಕ್ಕ | **<u>ಪುನರ್ಬಲನ ಚಟುವಟಿಕೆ</u>**<br>* ಪದ್ಯದ ಮೊದಲ ಮೂರು ನುಡಿಗಳನ್ನು ಶಿಕ್ಷಕರು ಹಾಡುವರು.<br>* ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸುವರು.<br>* ಮೊದಲ ಮೂರು ನುಡಿಗಳನ್ನು ಕಂಠಪಾಠ ಮಾಡಲು ತೊಡಗಿಸುವರು.<br>* ಮೊದಲ ನುಡಿಗಳನ್ನು ಪ್ರತಿಯೊಬ್ಬರಿಂದ ಹೇಳಿಸಿ, ತಪ್ಪುಗಳನ್ನು ಸರಿಪಡಿಸುವರು. |
| | 10 ನಿ | | | | | ಮಕ್ಕಳು ನಿರ್ವಹಿಸಿದ ಕಾರ್ಯವನ್ನು ವೀಕ್ಷಿಸುವರು ಮೆಚ್ಚುಗೆಯನ್ನು ವ್ಯಕ್ತಪಡಿಸುವರು. | | | | | ಪದ್ಯದ ಉಳಿದ ಎರಡು ನುಡಿಗಳನ್ನು ಪ್ರತಿಯೊಬ್ಬರಿಂದ ಕಂಠಪಾಠ ಹೇಳಿಸುವರು. |
| | 25 ನಿ | | | | ಶಿ | ಶಿಕ್ಷಕರು ಅಭಿನಯ ಗೀತೆಯೊಂದನ್ನು ಪರಿಚಯಿಸುತ್ತಾ ವಿದ್ಯಾರ್ಥಿಗಳಿಗೆ ಮುಖವಾಡವನ್ನು ತೊಡಿಸಿ ಅಭಿನಯ ಮಾಡಿಸುವರು.<br>ಒಂದು ಸಾರಿ ಸಿಂಹವೊಂದು ಮದುವೆಯಾಯಿತು. ಎಲ್ಲಾ ಪ್ರಾಣಿಗಳನ್ನು ಊಟಕ್ಕಾಗಿ ಕರೆಯಿತು. ಆನೆ, ಚಿರತೆ, ಕರಡಿ, ಹುಲಿ, ಒಂಟೆ ಬಂದವು, ಕುದುರೆ, ನರಿ, ಬೆಕ್ಕು ಉಡುಗೊರೆಯ ತಂದವು. ಮದುವೆಯಲ್ಲಿ ಕತ್ತೆಯೊಂದು ಹಾಡು ಹೇಳಿತು. ಆನೆ ಬೆನ್ನ ಮೇಲೆ ಕರಡಿ ತಬಲ ಹೊಡೆಯಿತು. ನರಿ ತಾಳ ಹಾಕಿತು, ಕೋತಿ ಡ್ಯಾನ್ಸ್ ಮಾಡಿತು. ಕತ್ತೆ ಹಾಡು ಕೇಳಿ ಎಲ್ಲಾ ನಕ್ಕುಬಿಟ್ಟವು. ಸಾಕು ಮೊದಲು ನಿಲ್ಲಿಸೆಂದು ಬೇಡಿಕೊಂಡವು. | | | | ಹಿರೇಮಣಿ | (ಹಿರೇಮಣಿಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಕಂಠಪಾಠ ಒಪ್ಪಿಸುವರು) |
| | 05 ನಿ | | | | ಶಿಕ್ಷಕ | ಐದು ಜೋಡಿ ಪ್ರಾಸಪದಗಳನ್ನು ಬರೆದುಕೊಂಡು ಬರಲು ಸೂಚಿಸುವರು. | | | | ಶಿಕ್ಷಕ | ಆಯ್ದ ವಿದ್ಯಾರ್ಥಿಗಳಿಂದ ಶಿಕ್ಷಕರು ಕಂಠಪಾಠ ಕೇಳಿ ದೃಢೀಕರಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ನೂರರೊಳಗಿನ ಸಂಖ್ಯೆಗಳನ್ನು, ಬರೆಯುವುದು, ಹತ್ತು ಬಿಡಿಗಳಾಗಿ ವಿಸ್ತರಿಸುವುದು | ಸಂಖ್ಯಾಫಲಕಗಳು, ಕಡ್ಡಿಗಳು, ಗೋಲಿಗಳು, ಮಣಿಗಳು ಹುಣಸೆ ಬೀಜಗಳು, ಬಳೆಗಳು, ಮಂಜುಟ್ಟಿಗಳು | ಮಕ್ಕ | **<u>ಪೂರ್ವ ಸಿದ್ಧತಾ ಚಟುವಟಿಕೆ</u>** – " ಹಸಿರ ಹಾಡ ಹಾಡುವೆ ನೆಲವ ಹಸಿರ ಮಾಡುವೆ". ಅಭಿನಯ ಗೀತೆ ಹಾಡಿಸುವರು. | ಜೀವನ ವಿಜ್ಞಾನ | ಶಾರೀರಿಕ ವಿಕಸನಗೊಳಿಸುವುದು. | | ಶಿಕ್ಷಕ | 2ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 25 ನಿ | | | | ಹಿರೇಮಣಿ | **<u>ಪುನರ್ಬಲನ ಚಟುವಟಿಕೆ:</u>** ಪಠ್ಯಪುಸ್ತಕದ ಪುಟಸಂಖ್ಯೆ 19ರಲ್ಲಿರುವ "ಹೊಂದಿಸು" ಈ ಚಟುವಟಿಕೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಇಂತಹವೇ ಬೇರೆ ಬೇರೆ ಚಟುವಟಿಕೆಗಳನ್ನು ಮಾಡಿಸುವರು. | | | | | ಧ್ಯಾನ ಮತ್ತು ವಜ್ರಾಸನ ಹಂತಗಳ ಬಗ್ಗೆ ಪರಿಚಯ ಮಾಡಿಸುತ್ತಾ "ಸರಳ ಯೋಗಾಸನಗಳನ್ನು" ಮಾಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನೇ ಪರಿಶೀಲನೆ ಮಾಡುವರು. | | | | ಸ್ವಯಂ | ಶವಾಸನ ಮಾಡುವರು. |
| | 25ನಿ | | | | ಶಿಕ್ಷಕ | ಪುನರ್ಬಲನ ಚಟುವಟಿಕೆಯನ್ನು ಮುಂದುವರೆಸುವರು. | | | | ಶಿಕ್ಷಕ | ಮಕ್ಕಳನ್ನು ಹೊರಾಂಗಣದ ಆಟಕ್ಕೆ ಕರೆದುಕೊಂಡು ಹೋಗಿ ಆಟ ಆಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಕೈಕಾಲು ಮುಖ ತೊಳೆದು ಮುಂದಿನ ಅವಧಿಗೆ ಅಣಿಯಾಗುವರು. |

**4ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ಅಂಶ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ಅಂಶ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿಮಿಷ | ಜೀವನ ಮೌಲ್ಯ | ತ್ಯಾಗ ಮತ್ತು ಸಹಕಾರ ಮೌಲ್ಯಗಳನ್ನು ಬೆಳೆಸುವುದು. | ರೇಡಿಯೋದಲ್ಲಿ ಹಾಗೂ ಪುಸ್ತಕದಲ್ಲಿ ಸಿಗುವ ನೀತಿ ಕಥೆಗಳು | ಶಿಕ್ಷಕ/ಕಿ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> "ಇರುವೆ ಮತ್ತು ಪಾರಿವಾಳ" ದ ಕಥೆಯನ್ನು ಭಾವ ಪೂರ್ಣವಾಗಿ ಹೇಳಿ ಮಕ್ಕಳಿಗೆ ಪ್ರಶ್ನೆಗಳನ್ನು ಸಣ್ಣ ಸಣ್ಣ ಪ್ರಶ್ನೆ ಕೇಳಿ ಅದಕ್ಕೆ ಉತ್ತರವನ್ನು ಎಲ್ಲಾ ಮಕ್ಕಳಿಂದಲೂ ಪಡೆದು ಮೌಲ್ಯಗಳ ಅರ್ಥವನ್ನು ಅದನ್ನು ಅನುಸರಿಸುವ ಕ್ರಮವನ್ನು ತಿಳಿಸುವರು. | ಜೀವನ ಮೌಲ್ಯ | ತ್ಯಾಗ ಮತ್ತು ಸಹಕಾರ ಮೌಲ್ಯಗಳನ್ನು ಬೆಳೆಸುವುದು. | ರೇಡಿಯೋದಲ್ಲಿ ಹಾಗೂ ಪುಸ್ತಕದಲ್ಲಿ ಸಿಗುವ ನೀತಿ ಕಥೆಗಳು | ಶಿಕ್ಷಕ/ಕಿ ಮತ್ತು ಮಾರ್ಗದರ್ಶಿ | 2ನೇ ತರಗತಿಯ ಮಕ್ಕಳ ಭಾಗವಹಿಸಿರುವ ಚಟುವಟಿಕೆಯಲ್ಲಿ 3ನೇ ತರಗತಿಯ ಮಕ್ಕಳು ಭಾಗವಹಿಸುವರು. |
| | 40 ನಿಮಿಷ | ಚಿನ್ನರ - ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಶಿಕ್ಷಕ/ಕಿ ಮಾರ್ಗದರ್ಶಿ | ಪ್ರಸಾರಪೂರ್ವದಲ್ಲಿ ರೇಡಿಯೋ ಕಾರ್ಯಕ್ರಮಕ್ಕೆ ಎಲ್ಲ ಮಕ್ಕಳನ್ನೂ ಅಣಿಗೊಳಿಸುವುದು. ಪ್ರಸಾರ ಸಮಯದಲ್ಲಿ ರೇಡಿಯೋ ಬೋಧನೆಯನ್ನು ಎಲ್ಲ ಮಕ್ಕಳೂ ಭಾಗವಹಿಸುವಂತೆ ನೋಡಿಕೊಳ್ಳುವುದು. ಪ್ರಸಾರಾನಂತರ ಚಟುವಟಿಕೆಯಲ್ಲಿ ಬರುವ ಪ್ರಶ್ನೆಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಮರುದಿನ ಪ್ರಶ್ನೆಗಳಿಗೆ ಉತ್ತರ ಬರೆದುಕೊಂಡು ಬರುವಂತೆ ಹೇಳಿ ತಿಳಿಸುವರು. | ಚಿನ್ನರ - ಚುಕ್ಕಿ ರೇಡಿಯೋ | ಕಾರ್ಯಕ್ರಮ | ರೇಡಿಯೋ | ಶಿಕ್ಷಕ/ಕಿ ಮಾರ್ಗದರ್ಶಿ | 2ನೇ ತರಗತಿಯ ಮಕ್ಕಳು ಭಾಗವಹಿಸುವ ಈ ಕಾರ್ಯಕ್ರಮದಲ್ಲಿ 3ನೇ ತರಗತಿಯ ಮಕ್ಕಳು ಭಾಗವಹಿಸುವರು. |
| 4ನೇ | 10 ನಿ | ನಮ್ಮ ಸುತ್ತಲಿನ ಪ್ರಾಣಿಗಳು | ಕೀಟಯ ಪ್ರಾಣಿಗಳನ್ನು ಗುರುತಿಸುವರು. | ಕೀಟಗಳ ಚಿತ್ರಗಳು | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ಪ್ರಾಣಿ ಮತ್ತು ಪಕ್ಷಿಗಳ ಹೆಸರುಗಳನ್ನು ಚಿಕ್ಕ ಚೀಟಿಗಳಲ್ಲಿ ಬರೆದು ಮಕ್ಕಳಿಂದ ಚೀಟಿ ಎತ್ತಿಸಿ ಬಂದ ಪ್ರಾಣಿ ಅಥವಾ ಪಕ್ಷಿಯ ಕೂಗನ್ನು ಅನುಕರಿಸಲು ತಿಳಿಸುವರು. | ನಮ್ಮ ಸುತ್ತಲಿನ ಪ್ರಾಣಿಗಳು | ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವರು ಪ್ರಾಣಿಗಳ ಬೆಳವಣಿಗೆ ಮತ್ತು ಸಸ್ಯಗಳನ್ನು ತಿಳಿಯುವರು. | | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u> ಪ್ರಾಣಿ ಮತ್ತು ಪಕ್ಷಿಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಮಕ್ಕಳಿಂದ ಚೀಟಿ ಎತ್ತಿಸಿ ಆ ಚೀಟಿಯಲ್ಲಿ ಬರೆದ ಪ್ರಾಣಿ ಅಥವಾ ಪಕ್ಷಿಯ ಧ್ವನಿಯನ್ನು ಅನುಕರಿಸಲು ತಿಳಿಸುವರು. |
| | 05 ನಿ | | | | | ಮಕ್ಕಳು ನೇರಬೋಧನೆಗೆ ಅಣಿಗೊಳ್ಳುವರು | | | ಪ್ರಾಣಿ ಮತ್ತು ಸಸ್ಯದ ಚಿತ್ರ | | ಮಕ್ಕಳು ಶಿಕ್ಷಕರು ತಿಳಿಸಿದ ಕಾರ್ಯವನ್ನು ಮಾಡುವರು. |
| | 25 ನಿ | | | | ಶಿಕ್ಷಕ | <u>**ಕಲಿಕಾಂಶ :**</u> ಶಿಕ್ಷಕರು ಕೆಲವು ಕೀಟಗಳ ಚಿತ್ರಗಳನ್ನು ತೋರಿಸುತ್ತಾ ಕೊಕ್ಕುಗಳಿಲ್ಲದೇ ಕೇವಲ ರೆಕ್ಕೆಗಳಿರುವ ಪ್ರಾಣಿಗಳನ್ನು ಕೀಟಗಳು ಎನ್ನುವರು ಎಂಬ ಅಂಶವನ್ನು ವಿವರಿಸುವರು. | | | | ಮಾರ್ಗದರ್ಶಿ | ಮಕ್ಕಳು ಶಿಕ್ಷಕರು ತಿಳಿಸಿದ ಕಾರ್ಯವನ್ನು ಮಾಡುತ್ತಿರುವರು. |
| | | | | | | <u>**ಪುರ್ನಬಲನ ಚಟುವಟಿಕೆ :**</u> ಪ. ಅ. ಪುಸ್ತಕದ ಪುಟಸಂಖ್ಯೆ 1 ಮತ್ತು 3ರಲ್ಲಿರುವ ಪ್ರಾಣಿ ಪಕ್ಷಿ, ಕೀಟಗಳ ಚಿತ್ರಗಳಿಗೆ ಹೆಸರುಗಳನ್ನು ಬರೆಯಲು ತಿಳಿಸುವರು. ಪುಟಸಂಖ್ಯೆ 3ರಲ್ಲಿರುವ ಚಟುವಟಿಕೆಯನ್ನು ಮಾಡಿಸುವರು. | | | | | |
| | 10 ನಿ | | | | | <u>**ಚಟುವಟಿಕೆ :**</u> ಪಾಠದ ಕೊನೆಯಲ್ಲಿರುವ ತಿಳಿ-ಕಲಿ ಚಟುವಟಿಕೆಯನ್ನು ಮಾಡಲು ಸೂಚಿಸುವರು. | | | | | ಮಕ್ಕಳು ಮಾಡಿದ ಕಾರ್ಯವನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡುವರು. |
| | 25 ನಿ | | | | ಮಾರ್ಗದರ್ಶಿ | ಶಿಕ್ಷಕರು ಸೂಚಿಸಿದ ಚಟುವಟಿಕೆಯನ್ನು ಮಕ್ಕಳು ಮಾಡುವರು. | | | ರಾಗಿ ಅಥವಾ ಹುರುಳಿ ಬೀಜಗಳು | ಶಿಕ್ಷಕ | <u>**ಕಲಿಕಾಂಶ ಚಟುವಟಿಕೆ :**</u> ಶಿಕ್ಷಕರು ಅನೇಕ ಉದಾಹರಣೆಗಳ ಮೂಲಕ ಪ್ರಾಣಿಗಳು ನಿರ್ದಿಷ್ಟ ಕಾಲದವರೆಗೆ ಬೆಳೆಯುತ್ತವೆ. ಆದರೆ ಸಸ್ಯಗಳು ಸಾಮಾನ್ಯವಾಗಿ ಬೆಳೆಯುತ್ತಲೇ ಇರುತ್ತವೆ.<br>ರಾಗಿ ಅಥವಾ ಹುರುಳಿ ಬೀಜವನ್ನು ತಂದು ಮಕ್ಕಳಿಗೆ ಆ ಬೀಜಗಳನ್ನು ಶಾಲಾ ಆವರಣದಲ್ಲಿ ಬಿತ್ತಿ ಪ್ರತಿದಿನ ನೀರುಣಿಸುತ್ತಾ, ಆಗುವ ಬದಲಾವಣೆಗಳನ್ನು ಬರೆದಿಡಲು ಸೂಚಿಸುವರು. |
| | 05 ನಿ | | | | | ಶಿಕ್ಷಕರು ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡುತ್ತಾ ನಾಳೆ ಬರುವಾಗ ನಿಮಗೆ ಸಿಗುವ ನಾಲ್ಕು ಪ್ರಾಣಿ, ಪಕ್ಷಿ, ಕೀಟಗಳ ಚಿತ್ರಗಳನ್ನು ಒಂದು ಹಾಳೆಯ ಮೇಲೆ ಅಂಟಿಸಿಕೊಂಡು ಬರಲು ತಿಳಿಸುವರು. | | | | | ನಿಮ್ಮ ಶಾಲೆಯ ಅಂಗಳದಲ್ಲಿರುವ 4-5 ಸಸ್ಯಗಳ ಹೆಸರನ್ನು ಬರೆಯಿರಿ. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಕೋಗಿಲೆ | ಸರಳ ಹಾಗೂ ಬಳಕೆಯಲ್ಲಿರದ ಗೀತೆ, ಹಾಡು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಹಾಡಿನ ಚಾರ್ಟು<br>ಪಠ್ಯ ಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ' ಪುಟ್ಟ ಪುಟ್ಟ ನವಿಲೆ ' ಹಾಡನ್ನು ಪುನರಾವರ್ತಿಸುವುದು. | ಕನ್ನಡ<br>ಬಾವಿಯಲ್ಲಿ ಚಂದ್ರ | ಕಥನ, ವಿವರಣೆ, ಪದಬಂಧ ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪಠ್ಯ ಪುಸ್ತಕ | ಶಿಕ್ಷಕ | 2ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಮೂರನೇ ತರಗತಿ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮುಂದಿನ ಪಾಠಕ್ಕೆ ಅಣಿಯಾಗುವರು. | | | | | ಶಿಕ್ಷಕರು ಹಿರೇಮಣಿಗೆ ಮುಂದಿನ ಚಟುವಟಿಕೆಯಲ್ಲಿ ಓದಿ-ತಿಳಿ ಪದಗಳನ್ನು ಬರೆಯಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **ಬಳಕೆಯಹಂತ :**<br>ಪುಟ ಸಂಖ್ಯೆ 3ರಲ್ಲಿರುವ ಭಾಷಾ - ಚಟುವಟಿಕೆ ಪದ್ಯದಲ್ಲಿ ಬಿಟ್ಟಿರುವ ಮುಂದಿನ ಪದ ಹೇಳಿ ಬರೆಯಿರಿ ಚಟುವಟಿಕೆಯನ್ನು ಮಾಡಿಸುವರು. | | | | ಸ್ವಯಂ ಕಲಿಕೆ | ಪಠ್ಯದಲ್ಲಿರುವ ಓದಿ - ತಿಳಿ ಪದಗಳನ್ನು ಬರೆಯುವರು. |
| | 10 ನಿ | | | | | ಶಿಕ್ಷಕರು ಪದ್ಯದ 8 ಸಾಲುಗಳನ್ನು ಬರೆಸಲು ಹಿರೇಮಣಿಗೆ ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಸ್ವಯಂ ಕಲಿಕೆ | ಶಿಕ್ಷಕರ ಸೂಚನೆಯಂತೆ ಹಿರೇಮಣಿಯು ಮಕ್ಕಳಿಂದ ಪದ್ಯದ ಎಂಟು ಸಾಲುಗಳನ್ನು ಮಕ್ಕಳು ಬರೆಯುವರು. | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಮಕ್ಕಳು ಕಂಠಪಾಠ ಮಾಡಿದ ಪದ್ಯವನ್ನು ಶಿಕ್ಷಕರು ವೈಯುಕ್ತಿಕವಾಗಿ ಹೇಳಿಸಿ, ಕೇಳುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮುಂದಿನ ಚಟುವಟಿಕೆಯನ್ನು ಮುಂದುವರೆಸುವರು. |
| 2ನೇ | 10 ನಿ | ಕನ್ನಡ | ಸರಳ ಹಾಗೂ ಬಳಕೆಯಲ್ಲಿರುವ ಗೀತೆ, ಹಾಡು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** " ಹಸಿರಿನ ಬನದಲ್ಲೇನು ಕಂಡೆ" ಹಸಿರಿನ ಬನದಲಿ ....... ಗೀತೆಯನ್ನು ಹಾಡಿಸುವರು. | ಪ. ಅ<br>ನಮ್ಮ ಸುತ್ತಲಿನ ಜೀವಿಗಳು | ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳನ್ನು ಗುರುತಿಸುವುದು. ಅವುಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸವವನ್ನು ತಿಳಿಸುವುದು. | ಪಠ್ಯಪುಸ್ತಕ, ಪ್ರಾಣಿ ಮತ್ತು ಸಸ್ಯಗಳ ಹೆಸರನ್ನು ಬರೆದು ಸುರುಳಿಸುತ್ತಿರುವ ಚೀಟಿಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** " ಹಸಿರಿನ ಬನದಲ್ಲೇನು ಕಂಡೆ" ಹಸಿರಿನ ಬನದಲಿ ....... ಗೀತೆಯನ್ನು ಹಾಡಿಸುವರು. |
| | 05 ನಿ | | | | | ಮುಂದಿನ ಚಟುವಟಿಕೆಗೆ ಅಣಿಯಾಗುವರು. | | | | | ಸೂಚನೆಗೆ : ಮೇಲಿನ ಚಟುವಟಿಕೆಯನ್ನು ಮಾಡಲು ಸೂಚಿಸುವರು. |
| | 25 ನಿ | ಕೋಗಿಲೆ | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ**<br>ಮಕ್ಕಳಿಗೆ ತಿಳಿದಿರುವ ಪ್ರಾಸ ಗೀತೆಗಳನ್ನು ಹೇಳಿಸುವರು. | | | | ಹಿರೇ ಮಣಿ | ಶಿಕ್ಷಕರು ಪಾಠದ ಕೊನೆಯಲ್ಲಿ ತಿಳಿ–ಕಲಿ ವಿಭಾಗ ದಲ್ಲಿರುವ (ಅ) 3 ಮತ್ತು 4 (ಆ) ಚಟುವಟಿಕೆಗಳನ್ನು ಮಾಡಲು ತಿಳಿಸುವರು. |
| | 10 ನಿ | | | | | ಸೂಚನೆಗೆ ಪ್ರಾಸಗೀತೆಗಳನ್ನು ಪರಿಶೀಲಿಸುವರು. | | | | | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಪ್ರಾಸ ಗೀತೆಗಳಿರುವ ಮಿಂಚು ಪಟ್ಟಿಗಳನ್ನು ಕೊಟ್ಟು ಬರೆಯಲು ಹೇಳುವರು. | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ**<br>ಪಾಠದ ಕೊನೆಯಲ್ಲಿ ಇರುವ ತಿಳಿ-ಕಲಿ ಭಾಗದ (3) ಸರಿ ಅಥವಾ ತಪ್ಪು ಅಂಶಗಳನ್ನು ಬರೆಸುವರು ಮಾರ್ಗದರ್ಶನ ಮಾಡವರು. ವಿವಿಧ ಪ್ರಾಣಿ ಹಾಗೂ ಸಸ್ಯಗಳ ಹೆಸರು ಬರೆದಿರುವ ಚೀಟಿಗಳನ್ನು ಸುರಳಿಸುತ್ತಿ ಡಬ್ಬದಲ್ಲಿ ಹಾಕಿ ಪ್ರತಿ ವಿದ್ಯಾರ್ಥಿಯು ಚೀಟಿ ಎತ್ತಿ ಅದರಲ್ಲಿನ ಪ್ರಾಣಿ/ಸಸ್ಯದ ಬಗ್ಗೆ ಮಾತನಾಡಲು ಹೇಳುವರು. (ಬಣ್ಣ ಆಕಾರ ಸೇವನೆ, ಕೂಗು ಇತ್ಯಾದಿಗಳ ಬಗ್ಗೆ ಮಾತನಾಡಲೂ ಸೂಚಿಸಬಹುದು). |
| | 05 ನಿ | | | | | ಮಕ್ಕಳು ಬರೆದಿರುವ ಪದಗಳನ್ನು ಪರಿಶೀಲಿಸುವರು. | | | | | ಸಸ್ಯಗಳಿಗೂ, ಪ್ರಾಣಿಗಳಿಗೂ ಇರುವ ವ್ಯತ್ಯಾಸಗಳನ್ನು ಪಟ್ಟಿಮಾಡಿಕೊಂಡು ಬರಲು ತಿಳಿಸುವರು. |

**5ನೇ ದಿನ**



| | | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ನಿಮಿಷ | ವಿಷಯ ಮತ್ತು ಕಲಿಕಾ ಕ್ಷೇತ್ರ | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಕ್ಷೇತ್ರ | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 40 ನಿ | ಪ.ಉ.ಆ.ಶಿ. | ಪರಿಸರ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು. | | ಶಿಕ್ಷಕ | ಸ್ವಚ್ಛತೆಯ ಬಗ್ಗೆ ಮಗುವಿಗೆ ಮೌಖಿಕವಾಗಿ ವಿಷಯವನ್ನು ಹೇಳುವರು. ಉದಾ. 1. ಶಾಲಾ ಸ್ವಚ್ಛತೆಯ ಬಗ್ಗೆ ತಿಳಿಸುವರು. ಮತ್ತು ಶಾಲಾ ಮಕ್ಕಳಿಂದ ಶಾಲಾ ಆವರಣದೊಳಗಿರುವ ಎಲೆಗಳು, ಕಲ್ಲುಗಳನ್ನು ತೆಗೆಸಿ, ಎಲೆಗಳನ್ನು ಒಂದು ಕಡೆ ಸಂಗ್ರಹಿಸಿಡಲು ಸೂಚಿಸುವರು. | | | | | ಇದೇ ಚಟುವಟಿಕೆಯಲ್ಲಿ ಈ ತರಗತಿಯ ಮಕ್ಕಳೂ ಸಹಾ ಭಾಗವಹಿಸಿರುತ್ತಾರೆ. |
| 3ನೇ | 40 ನಿ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಶಿಕ್ಷಕ/ಕಿ | ಪ್ರಸಾರ ಪೂರ್ವದಲ್ಲಿ ಕಾರ್ಯಕ್ರಮಕ್ಕೆ ಎಲ್ಲ ಮಕ್ಕಳನ್ನು ಅಣಿಗೊಳಿಸುವರು.<br>ಪ್ರಸಾರ ಸಮಯದಲ್ಲಿ ರೇಡಿಯೋ ಕಾರ್ಯ ಕ್ರಮದಲ್ಲಿ ಎಲ್ಲ ಮಕ್ಕಳು ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳುವರು.<br>ಪ್ರಸಾರ ನಂತರ ಚಟುವಟಿಕೆಯಲ್ಲಿ ಕೊಡುವಂತಹ ಪ್ರಶ್ನೆಗಳನ್ನು ಕಪ್ಪು ಹಲಗೆಯಲ್ಲಿ ಬರೆದು, ಉತ್ತರವನ್ನು ಮರುದಿನ ಬರೆದುಕೊಂಡು ಬರುವಂತೆ ತಿಳಿಸುವುದು. ಅದನ್ನೂ ದಾಖಲಿಸುವಂತೆ ತಿಳಿಸುವರು. | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಶಿಕ್ಷಕ/ಕಿ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳೂ ಕೂಡ ಭಾಗವಹಿಸುವರು. |
| 1 | 10 ನಿ | ಆರೋಗ್ಯ ಶಿಕ್ಷಣ | ಶರೀರ ರಚನೆ | ಯೋಗಾಸನದ ಚಿತ್ರಪಟಗಳು | ಶಿಕ್ಷಕ | ಶರೀರ ರಚನೆ ಬಗ್ಗೆ ಚಿತ್ರಪಟ ತೋರಿಸುತ್ತಾ ಸಾಮಾನ್ಯ ವಿವರಣೆ ಹೇಳುವರು. | ಆರೋಗ್ಯ ಶಿಕ್ಷಣ | ಶರೀರ ರಚನೆ | ಚಿತ್ರಪಟಗಳು | ಶಿಕ್ಷಕ | 3ನೇ ತರಗತಿಗೂ ಎರಡನೇ ತರಗತಿಯ ಮಕ್ಕಳಿಗೆ ಮಾಡಿಸಿದಂತಹ ಚಟುವಟಿಕೆಯನ್ನೇ ಮಾಡಿಸುವರು. |
| | 10 ನಿ | | | | | ಶರೀರ ರಚನೆ ಬಗ್ಗೆ ಚಿತ್ರಪಟ ತೋರಿಸುತ್ತಾ ಸಾಮಾನ್ಯ ವಿವರಣೆ ಹೇಳುವರು. | | | | | ಮಕ್ಕಳು ಭಾಗವಹಿಸುತ್ತಾರೆ. |
| 4ನೇ | 20 ನಿ | | | | ಶಿಕ್ಷಕ | ಸರಿಯಾದ ಭಂಗಿಗಳು<br>* ಕುಳಿತುಕೊಳ್ಳುವ<br>* ನಡೆಯುವ<br>* ಓದುವ<br>* ಬರೆಯುವ ಭಂಗಿಗಳ ಬಗ್ಗೆ ಪ್ರಯೋಜನಗಳನ್ನು ತಿಳಿಸುವರು.<br>ಸರಿಯಾದ ಭಂಗಿಗಳನ್ನು ಬಳಸದಿದ್ದಲ್ಲಿ ಆಗುವ ತೊಂದರೆಗಳನ್ನು ತಿಳಿಸುವರು. | | | | ಶಿಕ್ಷಕ | ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಈ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 30 | ಮೌಲ್ಯ ಶಿಕ್ಷಣ | ನೈತಿಕ ಮೌಲ್ಯ ಬೆಳೆಸುವುದು | ಕಥೆ ಪುಸ್ತಕ | ಶಿಕ್ಷಕ | ಪ್ರಾಮಾಣಿಕ<br>ಮೂರು ಕೊಡಲಿಗಳು ಈ ಪಾಠದ ಕತೆಯನ್ನು ಹೇಳುವ ಮುಖಾಂತರ ನೈತಿಕ ಮೌಲ್ಯ ಬೆಳೆಸುವರು. | ಮೌಲ್ಯ ಶಿಕ್ಷಣ | ನೈತಿಕ ಮೌಲ್ಯ ಬೆಳೆಸುವುದು | ಕಥೆ ಪುಸ್ತಕ | | ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಈ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 10 | | | | | ಮೌಲ್ಯಮಾಪನ ಈಗಾಗಲೇ ಶಿಕ್ಷಕರು ತಿಳಿಸಿರುವ ಆಸನಗಳನ್ನು ಪ್ರಾಯೋಗಿಕ ವಾಗಿ ಮಾಡುಸುತ್ತಾ ತಪ್ಪುಗಳನ್ನು ತಿದ್ದುವರು. | | | | | ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಈ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |

**6ನೇ ದಿನ**

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 40 ನಿ | | [illegible] | | | ಸಾಮೂಹಿಕ ಕವಾಯತು. | | | | | ಸಾಮೂಹಿಕ ಕವಾಯತು. |
| 2ನೇ | 10 ನಿ | ಕನ್ನಡ ಕೋಗಿಲೆ | ಸರಳ ಹಾಗೂ ಬಳಕೆಯಲ್ಲಿರುವ ಗೀತೆ,ಹಾಡು ಮತ್ತು ಮಕ್ಕಳಲ್ಲಿ ಹಾಡಿಕೆ ಕಥೆಗಳನ್ನು ವಿಷಯ ಅಭಿನಯದ ಜೊತೆಗೆ ಅರ್ಥಮಾಡಿಕೊಳ್ಳುವರು. ಬೆಳೆಸುವರು. | ಅಕ್ಷರ ಬಂಧ ಚಾರ್ಟ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ಅಭಿನಯ ಗೀತೆಯನ್ನು ಮುಂದುವರೆಸುವರು. | ಕನ್ನಡ | ಸರಳ ಹಾಗೂ ಬಳಕೆಯಲ್ಲಿರುವ ಗೀತೆ,ಹಾಡು ಮತ್ತು ಕಥೆಗಳನ್ನು ಅಭಿನಯದ ಜೊತೆಗೆ ಅರ್ಥಮಾಡಿಕೊಳ್ಳುವರು. | ಪದಬಂಧಗಳ ಒಗಟುಗಳ ಸಂಗ್ರಹ | | **ಪೂರ್ವ ಸಿದ್ಧತಾ ಚಟುವಟಿಕೆ :** ಎರಡನೇ ತರಗತಿಯ ಚಟುವಟಿಕೆಯಲ್ಲಿಯೇ ಮೂರನೇ ತರಗತಿ ಮಕ್ಕಳನ್ನು ತೊಡಗಿಸಿಕೊಳ್ಳುವರು. |
| | 05 ನಿ | | | | ಸ್ವಕಲಿಕೆ | **ಕಲಿಕಾಂಶ ಪುನರ್ಬಲನ**<br>ಅಕ್ಷರ ಬಂಧದ ಚಾರ್ಟನ್ನು ಕೊಟ್ಟು ಪದ ರಚನೆ ಮಾಡಲು ಹೇಳುವರು. | | | | | ನೇರ ಬೋಧನೆಗೆ ಅಣಿಯಾಗಲು ಸೂಚನೆ ನೀಡುವರು. |
| | 25 ನಿ | | | | ಹಿರೇಮಣಿ | ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ಅಕ್ಷರ ಬಂಧದ ಚಾರ್ಟನ್ನು ನೋಡಿ ಪದ ರಚನೆ ಮಾಡುವರು. | | | | ಶಿಕ್ಷಕ | **ಕಲಿಕಾಂಶ ಪುನರ್ಬಲನ**<br>ಅಪೂರ್ಣವಾದ ಪದ್ಯದ ಸಾಲುಗಳನ್ನು ಕರಿಹಲಗೆಯ ಮೇಲೆ ಬರೆದು ಪ್ರತಿಯೊಂದು ಮಗುವಿನಿಂದ ಭರ್ತಿ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಬರೆದ ಪದಗಳನ್ನು ಶಿಕ್ಷಕರು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹೀರೇಮಣಿಯು ಮಕ್ಕಳಿಗೆ ಅಭ್ಯಾಸದ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಪಡೆಯುವರು. |
| | 30 ನಿ | | | ಪ್ರಾಸ ಗೀತೆಗಳ ಸಂಗ್ರಹ | ಶಿಕ್ಷಕ | **ಪುನರ್ಬಲನ**<br>ಸರಳ ಹಾಗೂ ಬಳಕೆಯಲ್ಲಿರುವ ಪ್ರಾಸ ಗೀತೆಗಳನ್ನು ಅಭಿನಯದ ಮೂಲಕ ಹೇಳಿಕೊಡುವರು ಮತ್ತು ಮಕ್ಕಳಿಂದ ಮಾಡಿಸುವರು. | | | | ಸ್ವಯಂ ಕಲಿಕೆ | ಪದಬಂಧವನ್ನು ಹಿರೇಮಣಿ ಸಹಾಯದಿಂದ ಬಿಡಿಸಲು ತಿಳಿಸುವರು ಮತ್ತು ಒಗಟುಗಳಿಗೆ ಉತ್ತರ ಹುಡುಕಲು ಹೇಳುವರು. |
| 3ನೇ | 15 ನಿ | ಸಾ.ಉ.ಉ.ಕಾ | ಪರಿಸರ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವರು. | ತೆಂಗಿನ ಗರಿಗಳು, ಸ್ಥಳೀಯ ಗಿಡಗಳು. | ಶಿಕ್ಷಕ/ಕಿ | ಸ್ವಚ್ಛತೆಯ ಬಗ್ಗೆ ಅರಿವನ್ನು ಉಂಟುಮಾಡಲು ಕೆಲವು ಸರಳ ಪ್ರಶ್ನೆಗಳನ್ನು ಕೇಳುವರು. | ಸಾ.ಉ.ಉ.ಕ | ಪರಿಸರ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವರು. | ತೆಂಗಿನ ಕಡ್ಡಿಗಳು / ಈಚಲ ಗರಿಗಳು / ಸ್ಥಳೀಯ ಗಿಡಗಳು | | ಎರಡನೇ ತರಗತಿಗೆ ನೀಡಿರುವ ಚಟುವಟಿಕೆಗಳನ್ನು ಮೂರನೆಯ ತರಗತಿಗೂ ಮಾಡಿಸುವರು. |
| | 15 ನಿ | | | | | ಕಸಬರಕೆ ತಯಾರಿಸುವ ವಿಧಾನವನ್ನು ಹಂತ ಹಂತವಾಗಿ ಹೇಳಿಕೊಡುವರು. | | | | | ಕಸಬರಕೆ ತಯಾರಿಸುವ ವಿಧಾನವನ್ನು ಹಂತ ಹಂತವಾಗಿ ಹೇಳಿಕೊಡುವರು. |
| | 30 ನಿ | | | | | ತೆಂಗಿನ ಗರಿಗಳಿಂದ ಕಡ್ಡಿಗಳನ್ನು ಬೇರ್ಪಡಿಸುವರು. | | | | ಶಿಕ್ಷಕ | ತೆಂಗಿನ ಗರಿಗಳಿಂದ ಕಡ್ಡಿಗಳನ್ನು ಬೇರ್ಪಡಿಸುವರು. |
| | 20 ನಿ | | | | | ತೆಂಗಿನ ಗರಿಯ ಕಡ್ಡಿಗಳನ್ನು ಸರಿಯಾಗಿ ಜೋಡಣೆ ಮಾಡಿಕೊಂಡು ದಾರ ದಿಂದ ಕಟ್ಟುವರು ಹಾಗೂ ತುದಿಗಳನ್ನು ಸರಿಯಾಗಿ ಕತ್ತರಿಸಿ ಅಂದವಾಗಿ ಕಾಣುವಂತೆ ತಯಾರಿಸುವರು. | | | | | ಎರಡನೇ ತರಗತಿಗೆ ನೀಡುವ ಚಟುವಟಿಕೆಗಳನ್ನೇ ಮೂರನೇ ತರಗತಿಗೂ ಮಾಡಿಸುವರು. |

**7ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಕೋಗಿಲೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪ್ರಾಸ ಗೀತೆಗಳ ಮಿಂಚು ಪಟ್ಟಿ<br>ಕಥಾ ಚಿತ್ರಪಟಗಳ ಸಂಗ್ರಹ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** " ಪುಟ್ಟ ಪುಟ್ಟ ನವಿಲೆ" ಅಭಿನಯ ಗೀತೆಯನ್ನು ಮಕ್ಕಳಿಂದ ಸಾಮೂಹಿಕ ಹೇಳಿಸುವರು. | ಕನ್ನಡ ಬಾವಿಯಲ್ಲಿ ಚಂದ್ರ | ಕಥನ, ವಿವರಣೆ, ಪದಬಂಧ ಮತ್ತು ಒಗಟುಗಳನ್ನು ಆಲಿಸುವುದು ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಗಾದೆಗಳ ಮಿಂಚು ಪಟ್ಟಿಗಳನ್ನು ಕೊಟ್ಟು ನಕಲು ಮಾಡಲು ತಿಳಿಸುವುದು<br>ಗಾದೆಗಳ ಸಂಗ್ರಹ | ಸ್ವಯಂ ಕಲಿಕೆ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಮೂರನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | | ಮಕ್ಕಳು ಪಾಠಕ್ಕೆ ಅಣಿಯಾಗುವರು. | | | | | ಶಿಕ್ಷಕರು ಹಿರೇಮಣಿಯ ಸಹಾಯದಿಂದ ಗಾದೆಗಳ ಮಿಂಚುಪಟ್ಟಿಗಳನ್ನು ಕೊಟ್ಟು ನಕಲು ಮಾಡಲು ತಿಳಿಸುವರು. |
| | 25 ನಿ | | | | ಶಿಕ್ಷಕ | **<u>ಮೌಲ್ಯಮಾಪನ :</u>** ಶಿಕ್ಷಕರು ಕಥಾ ಪೆಟ್ಟಿಗೆಯಲ್ಲಿ ಕಥಾ ಚಿತ್ರಪಟಗಳನ್ನು ಪ್ರದರ್ಶಿಸಿ ಚಿತ್ರಕ್ಕೆ ಸಂಬಂಧಪಟ್ಟ ಕಥೆಯನ್ನು ಮಕ್ಕಳಿಂದ ಹೇಳಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮಕ್ಕಳು ಗಾದೆಗಳನ್ನು ನಕಲು ಮಾಡುವರು ಹೇಳಿಸುವರು. |
| | 10 ನಿ | | | | ಸ್ವಕಲಿಕೆ | ಪ್ರಾಸ ಗೀತೆಗಳ ಮಿಂಚುಪಟ್ಟಿಯನ್ನು ನಕಲು ಮಾಡಲು ಹೇಳುವುದು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | **<u>ಪುನರ್ಬಲನ ಚಟುವಟಿಕೆ</u>**<br>ಹಿರೇಮಣಿ ಸಹಾಯದಿಂದ ಮಿಂಚು ಪಟ್ಟಿಯನ್ನು ನೋಡಿ ನಕಲು ಮಾಡಿಸುವರು. | | | | ಶಿಕ್ಷಕ | **<u>ಪುನರ್ಬಲನ ಚಟುವಟಿಕೆ :</u>** ಶಿಕ್ಷಕರು ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ ಒಗಟು ಬಿಡಿಸುವ ಸ್ಪರ್ಧೆಯನ್ನು ಏರ್ಪಡಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | ಶಿ/ಕಿ | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ನೂರರೊಳಗಿನ ಸಂಖ್ಯೆಗಳನ್ನು ಬರೆಯುವುದು ಮತ್ತು ಬಿಡಿಗಳಾಗಿ ವಿಸ್ತರಿಸುವುದು. | ಖಾಲಿ ಬೆಂಕಿಪೊಟ್ಟಣಗಳು ಫಲಕಗಳು, ಕಡ್ಡಿಗಳು, ಗೋಲಿಗಳು, ಮಣಿಗಳು ಹುಣಸೆ ಬೀಜಗಳು, ಬಿಲ್ಲೆಗಳು ಮತ್ತು ಮಿಂಚುಪಟ್ಟಿಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** " ಒಂದು ಎರಡು ಬಾಳಲೆ ಹರಡು"<br>ಈ ಅಭಿನಯ ಗೀತೆಯನ್ನು ಹೇಳಿಸುವರು. | ಗಣಿತ ಪೂರ್ಣಾಂಕಗಳು ಮತ್ತು ಸಂಖ್ಯಾ ವಾಚಕಗಳು | 1-999 ರವರೆಗೆ ಎಣಿಕೆ, ಓದುವುದು, ಬರೆಯುವುದು | ಕಡ್ಡಿಗಳು, ಮಣಿಕಟ್ಟುಗಳು ಮತ್ತು ಬೀಜಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** " ಒಂದು ಎರಡು ಬಾಳಲೆ ಹರಡು"<br>ಈ ಅಭಿನಯ ಗೀತೆಯನ್ನು ಹೇಳಿಸುವರು. |
| | 05 ನಿ | | | | | ಮುಂದಿನ ಚಟುವಟಿಕೆಗೆ ಮಕ್ಕಳು ಅಣಿಯಾಗುವರು. | | | | | "ಮಣಿಕಟ್ಟು ನೋಡಿ ಸಂಖ್ಯೆ ಬರೆ" ಚಟುವಟಿಕೆ ಮಾಡಿಸಲು ಹಿರೇಮಣಿಗೆ ಸೂಚಿಸುವರು |
| | 25 ನಿ | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ :</u>** ಪ.ಪು.ದ ಪುಟಸಂಖ್ಯೆ 20 ರಲ್ಲಿರುವಂತೆ ಸಂಖ್ಯೆಗಳುಳ್ಳ ಚೌಕದಲ್ಲಿ ಚಿಕ್ಕ ಚಿಕ್ಕ ಬೀಜ ಅಥವಾ ಕಲ್ಲುಗಳನ್ನು ಹಾಕುವುದು. ಅವು ಯಾವ ಯಾವ ಚೌಕದ ಮೇಲೆ ಬೀಳುತ್ತವೆಯೋ ಆ ಚೌಕದಲ್ಲಿರುವ ಸಂಖ್ಯೆಗಳನ್ನು ಕೇಳುವರು. | | | | ಹಿರೇಮಣಿ | **<u>ಪೂರ್ವ ಬಾವಿ ಚಟುವಟಿಕೆ :</u>** ಪಠ್ಯಪುಸ್ತಕದ ಪುಟಸಂಖ್ಯೆ 16ರಲ್ಲಿರುವ "ಮಣಿಕಟ್ಟು ನೋಡಿ ಸಂಖ್ಯೆ ಬರೆ" ಚಟುವಟಿಕೆ "ಸ್ಥಾನಬೆಲೆ ಪಟ್ಟಿಯಲ್ಲಿ ಕೊಟ್ಟಿರುವುದನ್ನು ಸಂಖ್ಯೆಯಲ್ಲಿ ಬರೆ" ಚಟುವಟಿಕೆ ಮಾಡಿಸುವರು. |
| | 10 ನಿ | | | | | ಶಿಕ್ಷಕರು ಮಕ್ಕಳಿಗೆ ಕೆಲವು ಸೂಚನೆಗಳನ್ನು ನೀಡುವರು. | | | | | ಮಕ್ಕಳು ಮಾಡಿರುವ (ಬರೆದಿರುವ) ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಸ್ವಯಂ ಕಲಿಕೆ | **<u>ಮೌಲ್ಯಮಾಪನ ಚಟುವಟಿಕೆ :</u>** ಪ. ಪು. ದ. ಪುಟಸಂಖ್ಯೆ 21 ರಲ್ಲಿರುವ "ಬಿಟ್ಟು ಹೋಗಿರುವ ಸಂಖ್ಯೆಗಳನ್ನು ಬರೆ" ಚಟುವಟಿಕೆ ಮಾಡುವರು. | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ :</u>** ಪ. ಪು. ದ. ಪುಟಸಂಖ್ಯೆ 18 ಮತ್ತು 19 ರಲ್ಲಿರುವಂತೆ "ಸಂಖ್ಯೆಗಳನ್ನು ಸ್ಥಾನಬೆಲೆ" ಪಟ್ಟಿಯಲ್ಲಿ ಬರೆ. "ಸ್ಥಾನಬೆಲೆ ಪಟ್ಟಿಯಲ್ಲಿ ಕೊಟ್ಟಿರುವುದನ್ನು ಸಂಖ್ಯೆಯಲ್ಲಿ ಬರೆ"<br>ಈ ಎರಡೂ ಚಟುವಟಿಕೆ ಮಾಡಿಸುವರು. |
| | 05 ನಿ | | | | | ಮಕ್ಕಳು ಮಾಡಿದ ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | |

**7ನೇ ದಿನ**

| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಸಾಮರ್ಥ್ಯ ಸಂಕೇತ | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ ಸಂಕೇತ | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.<br>ಉ.<br>ಉ.<br>ಕಾ. | ತನ್ನ ಪರಿಸರದಲ್ಲಿ ಇರುವ ವಿವಿಧ ಬಗೆಯ ವೃತ್ತಿ ಉತ್ಪಾದಕ ಕಾರ್ಯಗಳಲ್ಲಿ ತೊಡಗಿರುವವರನ್ನು ಗುರುತಿಸುವರು. | ವಿವಿಧ ವೃತ್ತಿಗಳಲ್ಲಿ ತೊಡಗಿರುವ ವ್ಯಕ್ತಿಗಳ ಚಿತ್ರಗಳು, ಅಂಟು, ಡ್ರಾಯಿಂಗ್ ಹಾಳೆ ಕತ್ತರಿ ಬ್ಲೇಡ್ ಇತ್ಯಾದಿ | ಶಿಕ್ಷಕ | ತನ್ನ ಪರಿಸರದಲ್ಲಿ ಇರುವ ವಿವಿಧ ಬಗೆಯ ವೃತ್ತಿಗಳ ಬಗ್ಗೆ ವಿವರಗಳನ್ನು / ಚಿತ್ರಗಳನ್ನು ಸಂಗ್ರಹಿಸುವರು.<br>ಉದಾ : ಕುಂಬಾರ, ಕಮ್ಮಾರ, ದರ್ಜಿ, ರೈತ, ವೈದ್ಯ, ಶಿಕ್ಷಕ, ಅಂಚೆ-ಪೇದೆ, ಚಿನಿವಾರ, ಇತ್ಯಾದಿ. ಹಳೆಯ ವೃತ್ತ ಪತ್ರಿಕೆಗಳಿಂದ ಸಿಗುವ ಚಿತ್ರಗಳನ್ನು ಕತ್ತರಿಸಿ ಅಂಟಿಸುವ ಚಟುವಟಿಕೆ ಮಾಡಿಸುವುದು. | ಸಾ.<br>ಉ.<br>ಉ.<br>ಕಾ. | ತನ್ನ ಪರಿಸರದಲ್ಲಿ ಇರುವ ವಿವಿಧ ಬಗೆಯ ವೃತ್ತಿ ಉತ್ಪಾದಕ ಕಾರ್ಯಗಳಲ್ಲಿ ತೊಡಗಿರುವವರನ್ನು ಗುರುತಿಸುವರು. | ವಿವಿಧ ವೃತ್ತಿಗಳಲ್ಲಿ ತೊಡಗಿರುವ ವ್ಯಕ್ತಿಗಳ ಚಿತ್ರಗಳು, ಅಂಟು, ಡ್ರಾಯಿಂಗ್ ಹಾಳೆ ಕತ್ತರಿ ಬ್ಲೇಡ್ ಇತ್ಯಾದಿ | ಶಿಕ್ಷಕ | 2ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು.<br>**<u>ಈ ಗೀತೆಯನ್ನು ಮಕ್ಕಳಿಂದ ಹಾಡಿಸುವರು : ಅಭಿನಯ ಗೀತೆ</u>**<br>ಎತ್ತೇ ಎತ್ತೇ ನೀ ಯಾಕೆ ಎಳೆಯಲಿಲ್ಲ ಏನು ಮಾಡಲಪ್ಪ ನೊಗ ಒತ್ತುತ್ತೈತೆ ॥ಏನು॥ ನೊಗವೇ ನೊಗವೇ ನೀ ಯಾಕೆ ಒತ್ತೂತೀಯಾ ಏನು ಮಾಡಲಪ್ಪಾ ಈ ಬಡಗಿ ಕೆತ್ತಲಿಲ್ಲ ಬಡಗಿ ಬಡಗಿ ನೀ ಯಾಕೆ ಕೆತ್ತಲಿಲ್ಲಾ ಏನು ಮಾಡಲಪ್ಪ ಕಮ್ಮಾರ ತಟ್ಟಲಿಲ್ಲಾ ಕಮ್ಮಾರ ಕಮ್ಮಾರ ನೀ ಏಕೆ ತಟ್ಟಲಿಲ್ಲಾ ಏನು ಮಾಡಲಪ್ಪ ಈ ತಿದಿಯು ಸರಿಯಿಲ್ಲಾ ಏನು ಮಾಡಲಪ್ಪಾ ಒಂದು ಕೋಣ ಸಾಯಲಿಲ್ಲಾ ಕೋಣ ಕೋಣ ನಿಯಾಕೆ ಸಾಯಲಿಲ್ಲಾ ಹುಲ್ಲು ಚೆನ್ನಾಗಿ ಬೆಳೆಯುತ್ತಿದೆ. ಹುಲ್ಲೇ ಹುಲ್ಲೇ ನೀ ಏಕೆ ಬೆಳೆಯುತ್ತೀಯಾ ಏನು ಮಾಡಲಪ್ಪ ಮಳೆಯು ಚೆನ್ನಾಗಿ ಬರ್ತಿದೇ ಮಳೆಯೇ ಮಳೆಯೇ ನೀ ಯಾಕೆ ಬರ್ತೀಯಾ<br>ಏನು ಮಾಡಲಪ್ಪಾ ಇದು ಸೃಷ್ಟಿ ಕರ್ತನಾ<br>ನಿಯಮ ॥ಎತ್ತೇ ಎತ್ತೇ॥ |
| | 40 ನಿ. | ಚಿನ್ನರ - ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮವನ್ನು ಕೇಳಿಸುವುದು.<br>ಈ ಅವಧಿಯಲ್ಲಿ 2ನೇ ಮತ್ತು 3ನೇ ತರಗತಿಯ ಮಕ್ಕಳು ರೇಡಿಯೋ ಕಾರ್ಯಕ್ರಮದಲ್ಲಿ ಭಾಗವಹಿಸುವರು. | | | | ಒಟ್ಟಿಗೆ | ರೇಡಿಯೋ ಪಾಠ |
| 4ನೇ | 10 ನಿ | ಪ.ಅ<br>ನಮ್ಮ ಸುತ್ತಲಿನ ಸಸ್ಯಗಳು | ಸ್ಥಳೀಯ ಮರಗಿಡಗಳನ್ನು ಗುರುತಿಸುವರು ಸಸ್ಯಗಳ ಎತ್ತರ, ಹೂಗಳ ಬಣ್ಣ ಎಲೆಗಳ ಆಕಾರ ಮುಂತಾದವುಗಳನ್ನು ಹೋಲಿಸುವರು. | ಸಸ್ಯಗಳ ಚಿತ್ರಗಳನ್ನು ಹೊಂದಿರುವ ಚಿತ್ರಸಂಗ್ರಹದ ಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಮಕ್ಕಳಿಗೆ – "ಗಿಡನೆಡಿ, ಗಿಡನೆಡಿ, ಗಿಡನೆಡಿ ಮನೆಯ ನೆಟ್ಟು ಮುಂದೊಂದು ಗಿಡನೆಡಿ ಮನೆಯ ಹಿಂದೊಂದು ಗಿಡನೆಡಿ ಗಿಡವನ್ನು ಪರಿಸರ ಉಳಿಸಿ ನಾಡಿನ ಏಳಿಗೆಗೆ ಸಹಕರಿಸಿ" ಈ ಗೀತೆಯನ್ನು ಹೇಳಿಕೊಡುವರು. | ಜೀವಿಗಳು ಮತ್ತು ನಿರ್ಜೀವಿಗಳು | ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು ಸಜೀವ ಮತ್ತು ನಿರ್ಜೀವ ವಸ್ತುಗಳ ವಿಂಗಡಣೆಯನ್ನು ಕಲಿಯುವರು. | ಮಕ್ಕಳು ತಯಾರಿಸಿದ ಪಟ್ಟಿ | ಶಿಕ್ಷಕ | 2ನೇ ತರಗತಿ ಮಕ್ಕಳೊಡನೆ ಸೇರಿಕೊಂಡು ಅಭಿನಯ ಗೀತೆಯನ್ನು ಹಾಡುವರು. |
| | 05 ನಿ | | | | | ಪಾಠಕ್ಕೆ ಅಣಿಮಾಡಿಕೊಳ್ಳುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಸಸ್ಯಗಳ ಚಿತ್ರಪಟಗಳನ್ನು ಪ್ರದರ್ಶಿಸಿ ಸಸ್ಯಗಳನ್ನು ಗುರ್ತಿಸಲು ಹೇಳುವರು ಹಾಗೂ ಅವುಗಳ ಹೆಸರನ್ನು ಕಪ್ಪು ಹಲಗೆಯ ಮೇಲೆ ಬರೆಸುವರು | | | | ವೈಯಕ್ತಿಕ | ಸುತ್ತಮುತ್ತಲಿರುವ ವಸ್ತುಗಳನ್ನು ಪಟ್ಟಿ ಮಾಡಲು ಹಿರೇಮಣಿಗೆ ಸೂಚಿಸುವರು. |
| | 10 ನಿ | | | | | ಶಿಕ್ಷಕರು ಹೇಳಿದ ಮೇಲಿನ ಚಟುವಟಿಕೆಗಳನ್ನು ಮಕ್ಕಳು ಮಾಡುವರು. | | | | | ಮಕ್ಕಳು ಮಾಡಿರುವ ವಸ್ತುಗಳ ಪಟ್ಟಿಯನ್ನು ಪರಿಶೀಲಿಸುವರು. |
| | 25 ನಿ | | | | ವೈಯಕ್ತಿಕ | ಮೇಲಿನ ಚಟುವಟಿಕೆ ಮುಂದುವರೆಸುವರು. | | | | ಶಿಕ್ಷಕ | ಮಕ್ಕಳು ಪಟ್ಟಿ ಮಾಡಿದ ವಸ್ತುಗಳಲ್ಲಿ ಜೀವ ಇರುವ ಹಾಗೂ ಜೀವವಿಲ್ಲದ ವಸ್ತುಗಳನ್ನು ಬೇರ್ಪಡಿಸುವಂತೆ ಹೇಳುವರು. |
| | 05 ನಿ | | | | | ಮಕ್ಕಳು ಬರೆದ ಹೆಸರುಗಳನ್ನು ಪರಿಶೀಲಿಸುವರು. | | | | | ಸಜೀವಿ ಮತ್ತು ನಿರ್ಜೀವಿಗಳ ಚಿತ್ರ ಸಂಗ್ರಹಿಸಲು ಹೇಳುವರು. |

**8ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಛರಿಸುವುದು | ಅಭಿನಯ ಗೀತೆಗಳ ಸಂಗ್ರಹ | ಪೂರ್ಣ | **ಪೂರ್ವ ಸಿದ್ಧತಾ ಚಟುವಟಿಕೆ :** "ಸಮಯವ ಹೇಳುವ ಗಡಿಯಾರ ಟಿಕ್ ಟಿಕ್ ಎನ್ನುವ ಗಡಿಯಾರ ಸತತ ಸದ್ದಿನ ಗಡಿಯಾರ, ಅಚ್ಚುಕಟ್ಟಿನ ಗಡಿಯಾರ ಮಲಗುವ ಸಮಯ ಹೇಳುವ ಸಮಯ ಶಾಲೆಗೆ ಹೋಗಿ ಬರುವ ಸಮಯ," ಈ ಅಭಿನಯ ಗೀತೆಯನ್ನು ಹೇಳಿ ಕೊಡುವರು. | | | | | ಮನೆಯಲಿ ಓದಿ, ಬರೆಯುವ ಸಮಯ/-ಗೆಳೆಯರ ಜೊತೆಯಲ್ಲಿ ಆಡುವ ಸಮಯ/-ಅಮ್ಮನು ಕೆಲಸ ಮಾಡುವ ಸಮಯ/-ಅಪ್ಪನು ಕೆಲಸಕ್ಕೆ ಹೋಗುವ ಸಮಯ/-ವೇಳೆಯ ಲೆಕ್ಕದಿ ಹೇಳುವ ಒಡೆಯಾ, 2ನೇ ತರಗತಿಯ ಚಟುವಟಿಕೆಯಲ್ಲಯೇ 3ನೇ ತರಗತಿ ಮಕ್ಕಳು ಭಾಗವಹಿಸುವುದು. |
| | 05 ನಿ | ಕನ್ನಡ ಗಡಿಯಾರ | | | ಹಿರೇಮಣಿ | ಹಿರೇಮಣಿಗೆ ಮಾರ್ಗದರ್ಶನ ನೀಡುವರು. | ಕನ್ನಡ ಬಾವಿಯಲ್ಲಿ ಚಂದ್ರ | ಕಥನಗಳು, ವರದಿಗಳು, ಪದಬಂಧಗಳು ಮತ್ತು ಒಗಟುಗಳನ್ನು ಶ್ರವಣದ ಜೊತೆಗೆ ಓದಿ ಅರ್ಥ ಮಾಡಿಕೊಳ್ಳುವುದು. | ಚಿತ್ರ ಪುಸ್ತಕ | | ನೇರ ಬೋಧನೆಗೆ ಮಕ್ಕಳನ್ನು ಅಣಿಗೊಳಿಸುವರು. |
| | 25 ನಿ | | | ಗಡಿಯಾರದ ಮಾದರಿ | | ಶಿಕ್ಷಕರ ಸೂಚನೆಯಂತೆ ಹಿರೇಮಣಿಯು ಎಲ್ಲಾ ಮಕ್ಕಳಿಗೂ ಚಿತ್ರ ಬರೆಸುವರು. | | | | ಪೂರ್ಣ | **ಮೌಲ್ಯಮಾಪನ :** ಶಿಕ್ಷಕರು ಪದ್ಯದಲ್ಲಿರುವ ಓದಿ ತಿಳಿ ಮತ್ತು ಅಭ್ಯಾಸ ಚಟುವಟಿಕೆಗಳನ್ನು ಮಕ್ಕಳಿಂದ ಹೇಳಿಸಿ ಕ. ಹ. ಮೇಲೆ ಬರೆಯುವುದು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | | ಶಿಕ್ಷಕರು ಕ.ಹ. ಮೇಲೆ ಬರೆದ ಉತ್ತರಗಳನ್ನು ಮಕ್ಕಳು ಬರೆದುಕೊಳ್ಳುವುದನ್ನು ಪರಿಶೀಲಿಸಲು ಹಿರೇಮಣಿಗೆ ಸೂಚಿಸುವುದು. |
| | 25 ನಿ | | | ಗಡಿಯಾರದ ಮಾದರಿ | ಪೂರ್ಣ | **ಕಲಿಕಾಂಶ :** ಗಡಿಯಾರದ ಬಗ್ಗೆ ಮಕ್ಕಳಿಗೆ ತಿಳಿದಿರುವ ವಿಷಯಗಳನ್ನು ಸಂಭಾಷಣೆಯ ಮೂಲಕ ಶಿಕ್ಷಕರು ಚರ್ಚಿಸುವುದು. ಗಡಿಯಾರದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಉತ್ತರಗಳನ್ನು ಬರೆದುಕೊಳ್ಳುವರು. |
| | 05 ನಿ | | | | | | | | | | ಮಕ್ಕಳು ಬರೆದ ಉತ್ತರಗಳನ್ನು ಪರಿಶೀಲಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | * ಎರಡಂಕಿಗಳುಳ್ಳ ಸಂಖ್ಯೆಯಲ್ಲಿ ಬಿಡಿ ಮತ್ತು ಹತ್ತು ಎರಡು ಸ್ಥಾನಗಳುಂಟೆಂದು ಗುರುತಿಸುವುದು.<br>* ಹತ್ತರ ಗುಂಪು ಮತ್ತು ಬಿಡಿಗಳನ್ನಾಗಿ ಬರೆದು ಸ್ಥಾನಬೆಲೆಗಳನ್ನು ಗುರುತಿಸುವುದು. | ಕಡ್ಡಿಗಳು, ಮಣಿಗಳು, ಪಾಲಿ ಬಂಡಲ್‌ಗಳು | ಪೂರ್ಣ | **ಪೂರ್ವ ಸಿದ್ಧತಾ ಚಟುವಟಿಕೆ :** ಎಷ್ಟಪ್ಪ ಎಷ್ಟು (ಆಟ) | ಗಣಿತ ಸಂಖ್ಯೆಗಳು | * ಮೂರು ಅಂಕಿಗಳ ಸಂಖ್ಯೆಯಲ್ಲಿ ಪ್ರತಿ ಅಂಕಿಯ ಸ್ಥಾನ ಬೆಲೆ ಗುರುತಿಸುವುದು.<br>* ಮೂರು ಅಂಕಿಗಳ ಸಂಖ್ಯೆಯನ್ನು ವಿಸ್ತರಣಾ ರೂಪದಲ್ಲಿ ವಿಸ್ತರಣಾ ರೂಪವನ್ನು ಸಂಖ್ಯಾ ರೂಪದಲ್ಲಿ ಬರೆಯುವುದು. | ಕಡ್ಡಿಗಳು, ಮಣಿಗಳು, ಸ್ಥಾನಬೆಲೆ, ಕೋಷ್ಟಕ, ಮಿಂಚುಪಟ್ಟಿ | | **ಪೂರ್ವ ಸಿದ್ಧತಾ ಚಟುವಟಿಕೆ :** ಎಷ್ಟಪ್ಪ ಎಷ್ಟು (ಆಟ) |
| | 05 ನಿ | | | | | ಕಡ್ಡಿಗಳನ್ನು ಕೊಟ್ಟು ಬಿಡಿ ಮತ್ತು ಹತ್ತರ ಕಟ್ಟುಗಳನ್ನು ಮಾಡಲು ಸೂಚಿಸುವರು. | | | | | ಮಕ್ಕಳು ಮಿಂಚುಪಟ್ಟಿಗಳಲ್ಲಿನ ಅಂಕೆಗಳನ್ನು ಬರೆಯಲು ಸಿದ್ಧಗೊಳಿಸುವರು. |
| | 25 ನಿ | | | | ಹಿರೇಮಣಿ | **ಕಲಿಕಾಂಶ ಚಟುವಟಿಕೆ :** ಕಡ್ಡಿಗಳನ್ನು ಕೊಟ್ಟು, ಬಿಡಿ ಮತ್ತು ಹತ್ತರ ಕಟ್ಟುಗಳನ್ನು ಮಾಡಲು ಹೇಳುವರು. | | | | ಪೂರ್ಣ | **ಕಲಿಕಾಂಶ ಚಟುವಟಿಕೆ :** ನೂರು ಚುಕ್ಕಿಗಳಿರುವ ಕೆಲವು ಮಿಂಚುಪಟ್ಟಿ, ಹತ್ತು ಚುಕ್ಕಿಗಳಿರುವ ಕೆಲವು ಮಿಂಚುಪಟ್ಟಿ, ಬಿಡಿ ಚುಕ್ಕಿಗಳಿರುವ ಕೆಲವು ಮಿಂಚು ಪಟ್ಟಿಗಳನ್ನು ತೋರಿಸಿ ಸ್ಥಾನಬೆಲೆ ಕೋಷ್ಟಕದಲ್ಲಿ ಬರೆದು ತೋರಿಸುವುದು. ಮಿಂಚು ಪಟ್ಟಿಗಳನ್ನು ಬದಲಾಯಿಸುತ್ತ ಸ್ಥಾನಬೆಲೆ ಕೋಷ್ಟಕದಲ್ಲಿ ಸಂಖ್ಯೆಗಳನ್ನು ಬರೆಸುವರು. |
| | 10 ನಿ | | | | | ಮಕ್ಕಳು ಮಾಡಿರುವ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮಕ್ಕಳು ಬರೆದ ಸಂಖ್ಯೆಗಳನ್ನು ಪರಿಶೀಲಿಸಿ ಸೂಚನೆ ನೀಡುವರು. |
| | 25 ನಿ | | | | ಪೂರ್ಣ | **ಕಲಿಕಾಂಶ ಚಟುವಟಿಕೆ :** ಹತ್ತರ ಕಟ್ಟುಗಳು ಎಷ್ಟಿವೆ ಎಂದು ಎಣಿಸಿ ಹತ್ತರ ಸ್ಥಾನಬೆಲೆ ಕೋಷ್ಟಕದಲ್ಲಿ ಬರೆಯುವರು. ಬಿಡಿಗಳನ್ನು ಎಣಿಸಿ ಬಿಡಿ ಸ್ಥಾನದ ಬೆಲೆ ಕೋಷ್ಟಕದಲ್ಲಿ ಬರೆಯುವರು. ಇದೇ ರೀತಿ ಚಟುವಟಿಕೆ ಮುಂದುವರಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಗಳನ್ನು ಮುಂದುವರಿಸಲು ಹಿರೇಮಣಿಗೆ ಸೂಚನೆ ನೀಡುವರು. ನಂತರ ಹಿರೇಮಣಿಯ ಮುಖಾಂತರ ಚಟುವಟಿಕೆಗಳನ್ನು ಮುಂದುವರೆಸುವರು. |
| | 05 ನಿ | | | | | | | | | | ಮಕ್ಕಳು ಬರೆದ ಸಂಖ್ಯೆಗಳನ್ನು ವೀಕ್ಷಿಸಿ ಮಾರ್ಗದರ್ಶನ ನೀಡುವರು. |

**8ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬಳಸುವಂತಹ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬಳಸುವಂತಹ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿಮಿಷ | ಜೀವನ ಶಿಕ್ಷಣ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವರು. | ಶುಚಿತ್ವದ ವಸ್ತುಗಳ ಚಾರ್ಟ್ | ಶಿಕ್ಷಕ | ಸ್ವಚ್ಛತಾ ರೈಲಿನ ಬಗ್ಗೆ ಇರುವ ಹಾಡನ್ನು ಹೇಳಿ ಕೊಡುವರು.<br>ಉದಾ. : ಗೊಂಬೆಯ ಆಟದ ಮೂಲಕ ಆಟ ಆಡಿಸಿ ಪರಿಚಯಿಸುವರು.<br>ಸ್ವಚ್ಛತೆ ಇಲ್ಲದಿದ್ದರೆ ಅದರಿಂದ ಉಂಟಾಗುವ ತೊಂದರೆಗಳನ್ನು ಪರಿಚಯಿಸುವರು. | ಜೀವನ ಶಿಕ್ಷಣ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವರು. | ಶುಚಿತ್ವದ ವಸ್ತುಗಳ ಚಾರ್ಟ್ | ಶಿಕ್ಷಕ | ಸ್ವಚ್ಛತಾ ರೈಲಿನಲ್ಲಿರುವ ಹಾಡನ್ನು ಹೇಳಿಕೊಡುವರು.<br>ಉದಾ. : ಗೊಂಬೆಯ ಆಟದ ಮೂಲಕ ಆಟ ಪರಿಚಯಿಸುವರು. |
| | 40 ನಿ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | | ರೇಡಿಯೋ | ಶಿಕ್ಷಕ/ಕಿ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯ ಕ್ರಮವನ್ನು ಕೇಳಿಸುವರು. | | | | | ರೇಡಿಯೋ ಪಾಠದಲ್ಲಿ ಭಾಗವಹಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತಲಿನ ಸಸ್ಯಗಳು | ಸ್ಥಳೀಯ ಮರಗಳನ್ನು ಗುರ್ತಿಸುವರು<br>ಸಸ್ಯಗಳ ಎತ್ತರ, ಹೂಗಳ ಬಣ್ಣ, ಎಲೆಗಳ ಆಕಾರ ಮುಂತಾದವುಗಳನ್ನು ಹೋಲಿಸುವರು | ಮರಗಳು ಹಾಗೂ ಗಿಡ ಗಳನ್ನು ಹೊಂದಿರುವ ಚಿತ್ರಪಟಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಹಿಂದಿನ ದಿನ ಹೇಳಿಕೊಟ್ಟ ಪರಿಸರ ಗೀತೆ "ಗಿಡನೆಡಿ ಗಿಡನೆಡಿ" ಇದನ್ನು ಹೇಳಿಕೊಟ್ಟು ಅಭ್ಯಾಸ ಮಾಡಿಸುವರು. | ಪರಿಸರ ಅಧ್ಯಯನ ಜೀವಿಗಳು ಮತ್ತು ನಿರ್ಜೀವಿಗಳು | ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು<br>ಸಜೀವ ಹಾಗೂ ನಿರ್ಜೀವ ವಸ್ತುಗಳ ವಿಂಗಡನೆಯನ್ನು ಅರಿಯುವರು. | ತೆಂಗಿನಚಿಪ್ಪು ಹಾಗೂ ಹುರಳಿ ಬೀಜ | ಶಿಕ್ಷಕ | ಈ ತರಗತಿ ಮಕ್ಕಳು 2ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 05 ನಿ | | | | | ಗಾತ್ರದಲ್ಲಿ ವ್ಯತ್ಯಾಸವಿರುವ ಸಸ್ಯಗಳ ಹೆಸರುಗಳನ್ನು ಪಟ್ಟಿ ಮಾಡಿಸುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಅಣಿಯಾಗುವರು. |
| | 25 ನಿ | | | | ಮಕ್ಕಳು | **<u>ಪುನರ್ಬಲನ –</u>** ಮೇಲಿನ ಚಟುವಟಿಕೆಯನ್ನು ಮುಂದುವರೆಸುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಈ ಅವಧಿಯಲ್ಲಿ ಮಕ್ಕಳನ್ನು ಶಾಲೆಯ ಹೊರ ಪರಿಸರಕ್ಕೆ ಕರೆದುಕೊಂಡು ಹೋಗಿ ತೆಂಗಿನ ಚಿಪ್ಪಿನಲ್ಲಿ ಮಣ್ಣು ತುಂಬಿಸಲು ಹೇಳಿ, ಪ್ರತಿಯೊಬ್ಬ ವಿದ್ಯಾರ್ಥಿಗೂ ಹುರಳಿ ಬೀಜ ಕೊಟ್ಟು ಅದನ್ನು ಚಿಪ್ಪಿನಲ್ಲಿರುವ ಮಣ್ಣಿನಲ್ಲಿ ಹಾಕಿ ನೀರುಣಿಸಲು ಹೇಳಿ ಅದನ್ನು ಪ್ರತಿದಿನ ವೀಕ್ಷಿಸಿ ದಾಖಲು ಮಾಡಲು ಹೇಳುವರು. |
| | 10 ನಿ | | | | | ಮಕ್ಕಳು ಮಾಡಿದ ಸಸ್ಯಗಳ ಹೆಸರುಗಳ ಪಟ್ಟಿಯನ್ನು ಪರಿಶೀಲಿಸುವರು. | | | | | ಪರಿಸರದ ಚಿತ್ರ ಬರೆಯಲು ಹೇಳುವರು ಚಿತ್ರದಲ್ಲಿ ಸಸ್ಯಗಳು, ಪ್ರಾಣಿಗಳು ಇರುವಂತೆ ಹೇಳುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>**<br>ಮಕ್ಕಳಿಗೆ ತಾವು ನೋಡಿರುವ ಎತ್ತರದ ಮರಗಳು ಹಾಗೂ ಗಿಡಗಳ ಹೆಸರನ್ನು ಕೇಳಿ ಶಿಕ್ಷಕರು ಕ.ಹಲಗೆ ಮೇಲೆ ಪಟ್ಟಿ ಮಾಡಲು ಹೇಳುವರು ಹಾಗೂ ಕೆಲವು ಚಿತ್ರಪಟಗಳನ್ನು ತೋರಿಸಿ ಅವುಗಳಲ್ಲಿ ಮರಗಳು ಹಾಗೂ ಗಿಡಗಳನ್ನು ಹೆಸರಿಸಲು ಹೇಳುವರು. | | | | ಮಕ್ಕಳು | ಚಿತ್ರ ಬರೆಯುವ ಕಾರ್ಯದಲ್ಲಿ ಮಗ್ನರಾಗುವರು. |
| | 05 ನಿ | | | | | ಚಿತ್ರಪಟಗಳ ಸಹಾಯದಿಂದ ಮಕ್ಕಳು ಹೆಸರು ಬರೆಯುವಂತೆ ಹೇಳುವರು. | | | | | ಮಕ್ಕಳು ಬರೆದ ಚಿತ್ರಗಳ ಪರಿಶೀಲನೆ ಮಾಡುವರು. |

**9ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** |
